1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,
ಚಿಕ್ಕಮಗಳೂರು

<u>ಸ್ಪೆಷಲ್ ಮೊಕದ್ದಮೆ ಸಂಖ್ಯೆಃ 83/2018</u>

| | | | |
|---|---|---|---|
| ಸಾಕ್ಷಿದಾರರ ಹೆಸರು | ಗಿರೀಶ | ಪಿ.ಡಬ್ಲ್ಯೂ. | 04 |
| ತಂದೆಯ ಹೆಸರು | ರಾಜಪ್ಪ | ಸಿ.ಡಬ್ಲ್ಯೂ. | 04 |
| ವಯಸ್ಸು | 30 ವರ್ಷ | | |
| ಉದ್ಯೋಗ | ಚಾಲಕ | | |
| ವಾಸಸ್ಥಳ | ಆಲ್ದೂರು | | |

ದಿಃ 20.09.2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>

1. ನ್ಯಾಯಾಲಯದ ಮುಂದಿರುವ ಆರೋಪಿಗಳು, ಚಾಸಾ.1 ರಿಂದ 3 ಹಾಗೂ ಉಳಿಕೆ ಸಾಕ್ಷಿದಾರರು ಗೊತ್ತಿಲ್ಲ.

2. ಚಾಸಾ.1 ಹಾಗೂ ಆರೋಪಿಯ ಮಧ್ಯೆ ನಡೆದ ಯಾವುದೇ ಗಲಾಟೆಯ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯು ಚಾಸಾ.1 ರವರಿಗೆ ಅವಾಚ್ಯವಾಗಿ ಬೈದು, ಜಾತಿ ನಿಂದನೆ ಮಾಡಿ ದೊಣ್ಣೆಯಿಂದ ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿದ ಬಗ್ಗೆ ನನಗೆ ಗೊತ್ತಿಲ್ಲ. ಈಗ ನ್ಯಾಯಾಲಯದ ಮುಂದಿರುವ ಮು.ಮಾ.1 ದೊಣ್ಣೆಯನ್ನು ನಾನು ಈ ಹಿಂದೆ ನೋಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನ್ನ ಹೇಳಿಕೆಗೆ ವಿರುದ್ಧವಾಗಿ ಸಾಕ್ಷ್ಯನುಡಿಯುತ್ತಿರುವುದರಿಂದ ಮಾನ್ಯ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆನ್ನಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

3. ದಿಃ 08.01.2018 ರಂದು ನಾನು ನನ್ನ ಬಾಬ್ತು ಸಹಕಾರ ಸಾರಿಗೆ ಬಸ್ ನಂಬರು ಕೆಎ-18/ಎ-823 ರನ್ನು ಬೆಳಿಗ್ಗೆ 7.45 ಗಂಟೆಗೆ ಕೊಂಡದಖಾನ್ ನಿಂದ ಚಾಲನೆ ಮಾಡಿಕೊಂಡು ಬಾಳೆಹೊನ್ನೂರು ಮಾರ್ಗವಾಗಿ ಶಿವಮೊಗ್ಗಕ್ಕೆ ಹೋಗಿ ವಾಪಾಸ್ ಸಂಜೆ 4.30 ಗಂಟೆಗೆ ಬಾಳೆಹೊನ್ನೂರಿನಿಂದ ಹೊರಟು ಕಡಬರೆಗೆ ಮಾರ್ಗವಾಗಿ ಕೊಂಡದಖಾನ್ ಗೆ ಬರುತ್ತಿದ್ದೆ ಎಂದರೆ ಸರಿಯಲ್ಲ. ಆ ರೀತಿ ಬರುವಗ ಬಸ್ಸಿಗೆ ಆರೋಪಿತರು ಬೈಕನ್ನು ರಸ್ತೆಗೆ ಅಡ್ಡಲಾಗಿ ನಿಲ್ಲಿಸಿಕೊಂಡು ಸೈಡ್ ಕೊಡದೇ ಇದ್ದಾಗ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ.1 ರವರು ಆರೋಪಿತರಿಗೆ ಸೈಡ್ ಕೊಡುವಂತೆ ಕೇಳಿದರು ಎಂದರೆ ಸರಿಯಲ್ಲ. ಆಗ ಆರೋಪಿತರು ಚಾಸಾ.1 ರವರಿಗೆ ಸೂಳೆ ಮಗನೇ, ನಮಗೆ ಸೈಡ್ ಕೊಡು ಎಂದು ಹೇಳಲಿಕ್ಕೆ ನೀನು ಯಾರು ಎಂದು ಬಾಯಿಗೆ ಬಂದಂತೆ ಬೈದ್ದುರು ಎಂದರೆ ಸರಿಯಲ್ಲ. ನಂತರ ನಾನು ಗಲಾಟೆಯಾಗಬಹುದೆಂದು ಬಸ್ಸನ್ನು ಮುಂದೆ ಚಾಲನೆ ಮಾಡಿಕೊಂಡು ಬಿದರೆ ಗ್ರಾಮದ ಕಡೆ ಹೋಗುತ್ತಿರುವಾಗ, ಆರೋಪಿತರು ಬಂದು ಬಸ್ಸಿಗೆ ಅಡ್ಡಲಾಗಿ ಬೈಕನ್ನು ನಿಲ್ಲಿಸಿ, ಬಸ್ಸಿನ ಡೋರ್ ಬಳಿ ನಿಂತಿದ್ದ ಚಾಸಾ.1 ರವರನ್ನು ಬಸ್ಸಿನಿಂದ ಕೆಳಗೆ ಎಳೆದುಕೊಂಡು ಹೊಲೆಯ ಸೂಳೇಮಗನೇ, ಜಾತಿನಾ, ರಸ್ತೆ ನಿನ್ನ ಅಪ್ಪನಧ ರಸ್ತೆ ಬಿಡು ಎಂದು ನಮಗೆ ಹೇಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಜಾತಿನಿಂದನೆ ಮಾಡಿ ಬೈದ್ದು, ಕೈಯಿಂದ ಮೈಕೈಗೆ ಹೊಡೆದರು ಎಂದರೆ ಸರಿಯಲ್ಲ. ಅಲ್ಲದೆ ಚಾಸಾ.1 ರವರ ಶರಟನ್ನು ಹರಿದು ಬಿಸಾಡಿ ನಮ್ಮ ತಂಟೆಗೆ ಬಂದೆ ನಿನ್ನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು ಎಂದರೆ

ಸರಿಯಲ್ಲ. ಅಷ್ಟರಲ್ಲಿ ಬಸ್ಸಿನಲ್ಲಿದ್ದ ಚಾಸಾ.2 ಮತ್ತು 3 ರವರು ಜಗಳ ಬಿಡಿಸಿ ನನ್ನ ಬಸ್ಸಿನಲ್ಲಿಯೇ ಪ್ಯಾಂಟಿನಲ್ಲಿಯೇ ಚಾಸಾ.1 ರವನ್ನು ಬಸ್ಸಿಗೆ ಹತ್ತಿಸಿದರು ಎಂದರೆ ಸರಿಯಲ್ಲ. ನಾನು ಬಸ್ ಚಾಲನೆ ಮಾಡಿಕೊಂಡು ಬಿದರೆ ಕಡೆಗೆ ಹೋಗಿದ್ದು, ಚಾಸಾ.1 ರವರನ್ನು ಚಾಸಾ.2 ಮತ್ತು 3 ರವರು ಉಜ್ಜನಿ ಹೊಸಪೇಟೆ ನಿಲ್ದಾಣದಲ್ಲಿ ಇಳಿಸಿಕೊಂಡರು ಎಂದರೆ ಸರಿಯಲ್ಲ. ನಂರ ಚಾಸಾ.1 ರವರು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ ಹಲ್ಲೆ ಮಾಡಿದವರ ಮೇಲೆ ದೂರು ನೀಡಿರುವ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ.

4. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನಾನು ಪೊಲೀಸರಿಗೆ ಈಗ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ.6 ಎಂದು ಗುರುತಿಸಲಾಯಿತು.

5. ನಾನು ದ್ವಿತಿಯ ಪಿಯುಸಿ ಓದಿರುತ್ತೇನೆ. ನನಗೆ ಕನ್ನಡ ಬರೆಯಲು ಮತ್ತು ಓದಲು ಬರುವುದಿಲ್ಲ. ಚಾಸಾ.1 ಮತ್ತು ಆರೋಪಿ ಈಗ ರಾಜಿ ಮಾಡಿಕೊಂಡಿರುವ ಕಾರಣ, ನನಗೆ ಈ ಪ್ರಕರಣದ ಎಲ್ಲಾ ವಿಚಾರ ಗೊತ್ತಿದ್ದರು ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-
(ಬಿ.ಪುಷ್ಪಾಂಜಲಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಅ.